**ದಿನಾಂಕ: 21.05.2022 ರಂದು ಮದ್ಯಾಹ್ನ 3:00 ಗಂಟೆಗೆ ವಾರ್ಡ್ ಸಂಖ್ಯೆ 180 ಬನಶಂಕರಿ ದೇವಸ್ಥಾನ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ. ಸತೀಶ್ ಕುಮಾರ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಮಂಜುನಾಥ್ ವೆಂಕಣ್ಣ ನಾಯಕ – ಸಹಾಯಕ ಅಭಿಯಂತರರು (ವಾಡ್ 180 ಬನಶಂಕರಿ ದೇವಸ್ಥಾನ) (ಕಿಯೋನಿಕ್ಸ್)
3. ಶ್ರೀ. ಶಿವರುದ್ರಯ್ಯ – ಹಿ.ಆ.ಪ (ವಾಡ್ 180 ಬನಶಂಕರಿ ದೇವಸ್ಥಾನ)
4. ಶ್ರೀ. ಎಸ್. ಬಿ. ಸಿಂಗ್ – ಕಿ.ಆ.ಪ (ವಾಡ್ 180 ಬನಶಂಕರಿ ದೇವಸ್ಥಾನ)

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 180 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು (ಕಿಯೋನಿಕ್ಸ್) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಈ ಹಿಂದಿನ ಸಭೆಯಲ್ಲಿ ನಡೆಯದ ವಿಷಯಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿದೆ. ಅಧಿಕಾರಿಗಳಿಗೆ ನಿಗಧಿತ ಅವಧಿಯೊಳಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಕೋವಿಡ್–19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.

ಹಿಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ ಯಾರಬ್‌ನಗರ, ಸರಬಂಡೇಪಾಳ್ಯ, ಪ್ರಗತಿಪುರ, ಗಂಗಾಧರನಗರ, ಟೀಚರ್ಸ್‌ಕಾಲೋನಿ, ಉಮಾರ್‌ಭಾಗ್‌ಲೇಔಟ್ ವ್ಯಾಪ್ತಿಯಲ್ಲಿ ಜನದಟ್ಟನೆ ಅಧಿಕವಾಗಿದ್ದು ಕಸದ ಪಾಯಿಂಟ್‌ಗಳಲ್ಲಿ ಕಸದ ಪ್ರಮಾಣ ಹೆಚ್ಚಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಅದರಂತೆ ಸದರಿ ಪ್ರದೇಶಗಳಲ್ಲಿ ಕೋವಿಡ್–19 ನಿಯಂತ್ರಿಸುವ ಸಂಬಂಧ ಔಷಧಿ ಸಿಂಪಡಣೆಗೆ ಆದೇಶಿಸಲಾಗಿದ್ದ ಮೇರೆಗೆ ವಾರ್ಡ್ ವ್ಯಾಪ್ತಿಯಲ್ಲಿ ಔಷಧಿ ಸಿಂಪಡಿಸಲಾಗುತ್ತಿರುತ್ತದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿರುತ್ತಾರೆ.

2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.

ಹಿಂದಿನ ಸಭೆಯಲ್ಲಿ ಕೆ.ಪಿ. ಅಬ್ದುಲ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಸರಬಂಡೆಪಾಳ್ಯ ಮುಖ್ಯರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಒಳಚರಂಡಿ ಮತ್ತು ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಪೈಪ್‌ಗಳನ್ನು ಅಳವಡಿಸಲು ರಸ್ತೆಯನ್ನು ಅಗೆದಿರುವುದು ಸಾರ್ವಜನಿಕರಿಗೆ ತೊಂದರೆಯಾರುವ ಬಗ್ಗೆ ತಿಳಿಸಿದ್ದರ ಮೇರೆಗೆ ಸದರಿ ಕಾಮಗಾರಿಯನ್ನು, ಬಿಡಬ್ಲ್ಯೂಎಸ್‌ಎಸ್‌ಬಿ ರವರಿಂದ ಮುಕ್ತಾಯಗೊಳಿಸಲಾಗಿರುತ್ತದೆ. ಹಾಗೂ ಪಾಲಿಕೆ ವತಿಯಿಂದ ಸದರಿ ರಸ್ತೆ ಅಗೆತವನ್ನು ಮುಚ್ಚಿ ಸರಿಪಡಿಸಿ ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಲಾಗಿರುತ್ತದೆ ಎಂದು ಸ.ಅ (ವಾರ್ಡ್ – 180) ರವರು ಸಭೆಯಲ್ಲಿ ತಿಳಿಸಿರುತ್ತಾರೆ.

3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ಡೆಬ್ರಿಸ್ ವಿಲೇವಾರಿ ಬಗ್ಗೆ.

ಹಿಂದಿನ ಸಭೆಯಲ್ಲಿ ಸುಬ್ರಮಣ್ಯಪುರ ಮುಖ್ಯರಸ್ತೆ (ಡಾ॥ ವಿಷ್ಣುವರ್ಧನ್ ರಸ್ತೆ) ಯಲ್ಲಿ ಪಿಸ್‌ಟಿಐ ಕಾಂಪೌಂಡ್ ಹತ್ತಿರ ಇರುವ ಸಾರ್ವಜನಿಕ ಶೌಚಾಲಯ ಪಕ್ಕದಲ್ಲಿ ಹಾಗೂ ಹೊರ ವರ್ತುಲ ರಸ್ತೆ ಮತ್ತು ಗಂಗಾಧರನಗರ ಮುಖ್ಯರಸ್ತೆಯಲ್ಲಿ ಕಸ ಮತ್ತು ಡೆಬ್ರಿಸ್ ಇರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ವಾರ್ಡ್ ವ್ಯಾಪ್ತಿಯ ಸಿಲ್ಟ್ ಅಂಡ್ ಟ್ರಾಕ್ಟರ್ ಹಾಗೂ ಟಿಪ್ಪರ್ ಜೇಸಿಬಿ ಮುಖಾಂತರ ಕಸ ಮತ್ತು ಡೆಬ್ರಿಸ್ ಅನ್ನು ತೆರವುಗೊಳಿಸಲಾಗಿರುತ್ತದೆ ಎಂದು ಸ.ಅ (ವಾರ್ಡ್ – 180) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ತಿಳಿಸಿರುತ್ತಾರೆ.

4. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.

ವಾರ್ಡ್ ವ್ಯಾಪ್ತಿಯ ಸರಬಂಡೇಪಾಳ್ಯ ಮುಖ್ಯರಸ್ತೆ, 2ನೇ, 4ನೇ, 5ನೇ ಮತ್ತು 7ನೇ ಅಡ್ಡರಸ್ತೆಯಲ್ಲಿ ರಸ್ತೆಗುಂಡಿಗಳು ಇದ್ದು ಹಾಗೂ ಬಿಡಬ್ಲ್ಯೂಎಸ್ಎಸ್‌ಬಿ ರಸ್ತೆ ಅಗೆತಗಳು ಇರುವುದರಿಂದ ಸಾರ್ವಜನಿಕ ವಾಹನ ಸವಾರರಿಗೆ ಓಡಾಡಲು ತುಂಬಾ ಕಷ್ಟಕರವಾಗಿರುತ್ತದೆ. ಹಾಗೂ ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದ ಗಂಗಮ್ಮ ದೇವಸ್ಥಾನದ ಹತ್ತಿರ ಡೆಬ್ರಿಸ್ ಹಾಕಲಾಗಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ ಎಂದು ತಿಳಿಸಿದ್ದ ಮೇರೆಗೆ ಸಹಾಯಕ ಅಭಿಯಂತರರು – ಬಿಡಬ್ಲ್ಯೂಎಸ್ಎಸ್‌ಬಿ ರವರು ಮಾತನಾಡಿ ಸದರಿ ಡೆಬ್ರಿಸ್‌ಅನ್ನು ಭಾಗಶಃ ತೆರವುಗೊಳಿಸಲಾಗಿರುತ್ತದೆ. ಹಾಗೂ ಉಳಿದ ಡೆಬ್ರಿಸನ್ನು ತೆರವುಗೊಳಿಸಲು ಮಳೆಯಾಗುತ್ತಿರುವುದರಿಂದ ಕಾಲವಕಾಶಬೇಕೆಂದು ಸಭೆಯಲ್ಲಿ ತಿಳಿಸಿದರು. ಸಹಾಯಕ ಅಭಿಯಂತರರು, ವಾರ್ಡ್–180 ರವರು ಮಾತನಾಡಿ ಹಿಂದಿನ ಸಭೆಯಲ್ಲಿ ತಿಳಿಸಲಾಗಿರುವ ಸರಬಂಡೆಪಾಳ್ಯ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳಲ್ಲಿ ಇದ್ದ ರಸ್ತೆಗುಂಡಿಗಳನ್ನು ಮುಚ್ಚಲಾಗಿರುತ್ತದೆ ಎಂದು ತಿಳಿಸಿದರು.

ಆದಿನಾರಾಯಣ ರವರು ಮಾತನಾಡಿ ಹೊರ ವರ್ತುಲ ರಸ್ತೆಯಲ್ಲಿ ಗಂಗಾದರನಗರ ಮುಖ್ಯರಸ್ತೆಯ ಗಿರಿಯಾಸ್ ಹತ್ತಿರ ಅಧಿಕವಾಗಿ ಮಳೆಯಾದ ಕಾರಣ ರಸ್ತೆಯಲ್ಲಿ ನೀರು ನಿಂತಿರುತ್ತದೆ. ಶೋಲ್ಡರ್ ಡ್ರೈನ್‌ಅನ್ನು ಸ್ವಚ್ಚಗೊಳಿಸಿ ಡೆಬ್ರಿಸ್ ತೆರವುಗೊಳಿಸಲು ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಸಹಾಯಕ ಅಭಿಯಂತರರು ವಾರ್ಡ್ 180 ರವರು ಮಾತನಾಡಿ ಸದರಿ ರಸ್ತೆಯನ್ನು ದಿನಾಂಕ: 18-05-2022 ರಂದು ಸಿಲ್ಟ್ ಅಂಡ್ ಟ್ರಾಕ್ಟರ್ ಮುಖಾಂತರ ಸದರಿ ಶೋಲ್ಡರ್ ಡ್ರೈನ್ ಅನ್ನು ಸ್ವಚ್ಚಗೊಳಿಸಿ ಡೆಬ್ರಿಸ್ ಅನ್ನು ತೆರವುಗೊಳಿಸಲಾಗಿರುತ್ತದೆ.

ಅಧ್ಯಕ್ಷರು ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಪ್ರಸ್ತುತ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ವಾರ್ಡ್ ಮಟ್ಟದ ಶೋಲ್ಡರ್ ಡ್ರೈನ್ ಮತ್ತು ಡೆಬ್ರಿಸ್‌ಗಳನ್ನು ಆಗಿಂದಾಗ್ಗೆ ಸ್ವಚ್ಚಗೊಳಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

**ಕ್ರಮ: ಸ.ಅ (ವಾರ್ಡ್ 180)**

ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಅಧಿಕವಾಗುತ್ತಿದ್ದು ಪ್ರತಿದಿನ ಸ್ವಚ್ಚಗೊಳಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಚಿಸಲಾಯಿತು.

**ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು**

ವಾರ್ಡ್ ವ್ಯಾಪ್ತಿಯಲ್ಲಿ ಪ್ರಸ್ತುತ ಗಾಳಿ ಸಹಿತ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ಮರ ಬೀಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸದರಿ ಮರಗಳನ್ನು ಆಗಿಂದಾಗ್ಗೆ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಅರಣ್ಯ ಅಧಿಕಾರಿ (ದಕ್ಷಿಣ–ಬಿಬಿಎಂಪಿ) ರವರಿಗೆ ಸೂಚಿಸಲಾಯಿತು.

**ಕ್ರಮ: ಅರಣ್ಯ ಅಧಿಕಾರಿ (ದಕ್ಷಿಣ–ಬಿಬಿಎಂಪಿ)**

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಸತೀಶ್ ಕುಮಾರ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Satyprasad

ನೋಡೆಲ್ ಅಧಿಕಾರಿ
ವಾರ್ಡ್ ಸಂಖ್ಯೆ 180
ಬನಶಂಕರಿ ದೇವಸ್ಥಾನ